ಸಾಕ್ಷಿಯನ್ನು ದಿಃ 29-05-2023 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎಮ್.ಎನ್.ಬಿ ವಕೀಲರಿಂದಃ ಪ್ರತಿವಾದಿ ನಂ.9 (ಬಿ) ದಿಂದ (ಡಿ) , 10 ಮತ್ತು 15 ರವರ ಪರವಾಗಿ

ನಾನು 9 ನೇ ತರಗತಿಯರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವಾ ಬರೆಯಲು ಯಾರು ಮಾಹಿತಿ ಕೊಟ್ಟರು ಎಂದರೆ ಸಾಕ್ಷಿ ನನ್ನ ಅಜ್ಜಿ ಅನಸಮ್ಮ ಎಂದು ನುಡಿಯುತ್ತಾರೆ. ನನ್ನ ಅಜ್ಜಿ ಸರಿಯಾಗಿ ಮಾಹಿತಿ ಕೊಟ್ಟಿದ್ದಾಳೊ ಇಲ್ಲವೊ ಎನ್ನುವುದನ್ನು ತಾನು ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿ 245/1, 245/2ಬ , 245/ಅ ಮತ್ತು 245/4 ಇವುಗಳನ್ನು ದಾವಾ ಆಸ್ತಿಗಳನ್ನಾಗಿ ಮಾಡಿರುತ್ತೇನೆ ಎಂದರೆ ಸರಿ. ನಾನು ಸದರಿ ಆಸ್ತಿಗಳಿಗೆ ಸಂಬಂಧಿಸಿದ ಪಹಣಿ ಉತಾರಗಳನ್ನು ಹಾಜರುಪಡಿಸಿಲ್ಲ ಬದಲಾಗಿ ವಾರ್ಷಿಕ ತತ್ತೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. 1950 ರಿಂದ ಪಹಣಿ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಪಡೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಗೊತ್ತಾಗಲಿಲ್ಲ ತಂದಿರುತ್ತೇನೆ ಎಂದು ನುಡಿಯುತ್ತಾರೆ.

2. ನಮ್ಮ ಮನೆತನದ ವಂಶಾವಳಿ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ನನ್ನ ಅಜ್ಜನ ಹೆಸರು ಫಕ್ಕಿರಪ್ಪ, ಫಕ್ಕಿರಪ್ಪ ಇವರ ಅಪ್ಪನ ಹೆಸರು ಸೋಮಪ್ಪ, ಸೋಮಪ್ಪ ಇವರ ಅಪ್ಪನ ಹೆಸರು ಬಸಪ್ಪ. ನಿಶಾನೆ ಪಿ-8 ರ ಪ್ರಕಾರ ನನ್ನ ಮುತ್ತಜ್ಜನ ಹೆಸರು ಬಸಪ್ಪ ಫಕ್ಕಿರಪ್ಪ ಇಂಗಳಗಿ ಎಂಬುದಾಗಿ ಇದೆ ಎಂದರೆ ಸರಿ. ಬಸಪ್ಪನಿಗೆ ಇಬ್ಬರೂ ಸಹೋದರರು ಎಂದರೆ ಸಿಧ್ರಾಮಪ್ಪ ಹಾಗೂ ಚನ್ನಬಸಪ್ಪ ಎಂದರೆ ಸಾಕ್ಷಿ, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದದರಿ ಮೂರು ಮಂದಿ ಎಷ್ಟು ಎಷ್ಟು ಆಸ್ತಿಯನ್ನು ಹಂಚಿಕೊಂಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಫಕ್ಕಿರಪ್ಪನಿಗೆ ಸರ್ವೆ ನಂ.245/1 ಕ್ಷೇತ್ರ 6 ಎಕರೆ 22 ಗುಂಟೆ , 245/2 ಕ್ಷೇತ್ರ 6 ಎಕರೆ 19 ಗುಂಟೆ , ಸರ್ವೆ ನಂ 245/3 ಕ್ಷೇತ್ರ 6 ಎಕರೆ 19 ಗುಂಟೆ, ಸದರಿಯವುಗಳು ಅಂದರೆ 245/1 ಮತ್ತು 245/2 ಇವುಗಳು ಸೋಮಪ್ಪ ಬಸಪ್ಪ

ಇಂಗಳಗಿ ಇವರ ಹೆಸರಿನಲ್ಲಿ ಖಾತೆಯಾದವು ಅಂದರೆ ಸರಿ. ಅದೇ ರೀತಿ 245/2 ಕ್ಷೇತ್ರ 6 ಎಕರೆ 14 ಗುಂಟೆ ಸಿದ್ರಾಮಪ್ಪ ಬಸಪ್ಪ ಇಂಗಳಗಿ ಇವರ ಹೆಸರಿನಲ್ಲಿ ಖಾತೆ ಆದವು ಎಂದರೆ ಸಾಕ್ಷಿ, ಹೌದು ಎಂದು ನುಡಿಯುತ್ತಾರೆ. 245/3 ಚನ್ನಬಸಪ್ಪ ಫಕ್ಕಿರಪ್ಪ ಇಂಗಳಗಿ ಹೆಸರಿನಲ್ಲಿ ಖಾತೆ ಆದವು ಎಂದರೆ ಸಾಕ್ಷಿ, ಹೌದು ಎಂದು ನುಡಿಯುತ್ತಾರೆ. ಹೀಗಾಗಿ ಅವರವರ ಜಮೀನುಗಳಿಗೆ ಅವರೇ ಮಾಲಿಕರಾಗಿ ಸಾಗುವಳಿದಾರರು ಎಂದರೆ ಸರಿ.

3. ಈ ಸಂಬಂಧ ಡ ನಂಬರಗಳು 468, 1777, 2067, 2825, 3246 ಕೂಡ ಆಗಿದೆ ಎಂದರೆ ಸರಿ. ಈ ದಾಖಲೆಗಳನ್ನು ನಾನು ಈ ದಾವಾದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ನನ್ನ ಲಿಖಿತ ತಕರಾರಿನಲ್ಲಿ ವಾದಿ ಮತ್ತು ಪ್ರತಿವಾದಿಯರ ಮನೆತನದ ಪೂರ್ಣ ವಂಶಾವಳಿಯನ್ನು ತೋರಿಸಿರುತ್ತೇನೆ ಎಂದರೆ ಸಾಕ್ಷಿ, ನನಗೆ ಸೋಮಪ್ಪನ ವಂಶಾವಳಿ ಮಾತ್ರ ಗೋತ್ತಿರುತ್ತದೆ ಉಳಿದವು ಗೊತ್ತಿಲ್ಲ ಎಂದು ನುಡಿಯುತ್ತಾರೆ ಸದರಿ ವಂಶಾವಳಿ ಸರಿ ಇದೆವೂ ಇಲ್ಲವೂ ಎಂಬುದನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಡ ದಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನೋಡಿರುವ ಡ ನಂಬರ ನನಗೆ ಹೇಳಲು ಆಗುವುದಿಲ್ಲ. ನನ್ನ ಅಜ್ಜ ಸಿದ್ರಾಮಪ್ಪ ಮರಣ ಹೊಂದಿರುತ್ತಾರೆ. ಸದರಿ ಸಿದ್ರಾಮಪ್ಪನಿಗೆ ಚನ್ನವೀರವ್ವ ಹೆಂಡತಿ, ಸರೋಜವ್ವ, ಬಸಮ್ಮ, ಫಕ್ಕಿರೇಶ ಎನ್ನುವರು ಮಕ್ಕಳು ಎಂದರೆ ಸರಿ. ಚನ್ನವೀರವ್ವ ಯಾರ ಮಗಳು ಎಂದು ನನಗೆ ಗೊತ್ತಿಲ್ಲ. ಸದರಿ ಚನ್ನವೀರವ್ವ ಮೂಲ ಫಕ್ಕೀರಪ್ಪನ ಮಗ ಸಿದ್ರಾಮಪ್ಪ ಅವರ ಮಗಳ ಮಗಳು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ಸದರಿ ಮೂಲ ಸಿದ್ರಾವುಪ್ಪ ಇವರಿಗೆ ಸೇರಿದ ಆಸ್ತಿ 245/2 ಆಗಿದ್ದು, ಸದರಿ ಆಸ್ತಿ ಈಗ ಸರ್ವೆ ನಂ.245/2 ಬ ಮತ್ತು 245/2 ಅ ಎಂದು ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಚನ್ನವೀರವ್ವ ತನಗೆ ಬಂದ ಆಸ್ತಿಯನ್ನು ಪ್ರತಿವಾದಿ 15 ರವರಿಗೆ ಖಾತಾ ಮಾಡಿ ಕೊಟ್ಟಿರುತ್ತಾಳೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹೀಗಾಗಿ ಮೇಲೆ ಹೇಳಿದ ದಾವಾ ಆಸ್ತಿಗಳಿಗೆ ಪ್ರತಿವಾದಿ ನಂ.15 ಮಾಲಿಕಳಾಗಿದ್ದಾಳೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 245/1 ಕ್ಕೆ ಅಷ್ಟೇ ನಾವು ಭಾಗಿದಾರರು ಉಳಿದಂತೆ ಸಿದ್ರಾಮಪ್ಪ ಹಾಗೂ ಚನ್ನಬಸಪ್ಪ ಅವರ ಆಸ್ತಿಗೆ ನಾವು ಭಾಗಿದಾರರು ಅಲ್ಲ ಎಂದರೆ ನನಗೆ ಅದೆನೂ ಗೊತ್ತಿಲ್ಲ ಎಂದು ನುಡಿಯತ್ತಾರೆ. ಅದೇ ರೀತಿ 245/2 ಬ ಮತ್ತು 245/2, 245/4 ಈ ಮೂರು ಆಸ್ತಿಗಳಿಗೆ ನಾವು

ಸಂಬಂಧಪಟ್ಟವರಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಆಸ್ತಿಗಳನ್ನು ಮೊಸಮಾಡಿ ಪಡೆಯಬೇ11 ಕುಎಂಬ ಉದ್ದೇಶದಿಂದ ನನ್ನ ಅಜ್ಜ ಈ ಎಲ್ಲ ಆಸ್ತಿಗಳನ್ನು ಸೇರಿಸಿರುತ್ತಾರೆ ಎಂದರೆ ಸರಿ ಅಲ್ಲ. ಈ ಪ್ರಕರಣದಲ್ಲಿ ನನಗೆ ಏನೂ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ